KACB310026002024

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ**

**ಚಿಂತಾಮಣಿ**

**ಉಪಸ್ಥಿತರು : ಶ್ರೀಮತಿ ಹರ್ಷಿತ** ಬಿ.ಎ.,ಎಲ್‌ಎಲ್.ಬಿ.,

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,**

**ನ್ಯಾಯಾಲಯ ಚಿಂತಾಮಣಿ.**

**ಸಿಸಿ ನಂಃ 1002/2024**

**ದಿನಾಂಕಃ 02 ನೇ ಜೂನ್ 2026**

**ಫಿರ್ಯಾದುದಾರರು** : ಚಿಂತಾಮಣಿ ಗ್ರಾಮಾಂತರ ಪೋಲಿಸ್

(ಸರ್ಕಾರದ ಪರವಾಗಿ ಸ.ಸ.ಅ.)

**ವಿರುದ್ಧ**

**ಆರೋಪಿತರುಃ** 1. ದೇವರಾಜ @ ದೇವ ಬಿನ್ ರಮೇಶ್,
ವಯಾಃ 24 ವರ್ಷ,
ವಾಸಃ ಕೈವಾರ ಗ್ರಾಮ,
ಚಿಂತಾಮಣಿ ತಾಲ್ಲೂಕು,
ಚಿಕ್ಕಬಳ್ಳಾಪುರ ಜಿಲ್ಲೆ.

(ಆರೋಪಿ ಪರ ಶ್ರೀ.ಆರ್.ಎಸ್.ಎಸ್., ವಕೀಲರು)

| | |
|---|---|
| ಘಟನೆ ನಡೆದ ದಿನಾಂಕ | 25-03-2024 |
| ವರದಿ ಮಾಡಿದ ದಿನಾಂಕ | 26-03-2024 |
| ಪ್ರಕರಣದ ಸ್ವರೂಪ | ಭಾರತೀಯ ದಂಡ ಸಂಹಿತೆ ಕಲಂಃ 324, 504, 506, 427. |
| ಫಿರ್ಯಾದುದಾರರ ಹೆಸರು | ವಿನಯ್.ಜೆ.ಕೆ |
| ಸಾಕ್ಷಿ ವಿಚಾರಣೆ ಪ್ರಾರಂಭವಾದಿ ದಿನಾಂಕ | 29-05-2026 |
| ಸಾಕ್ಷಿ ವಿಚಾರಣೆ ಮುಗಿದ ದಿನಾಂಕ | 29-05-2026 |

| | |
|---|---|
| ನ್ಯಾಯಾಧೀಶರ ಅಭಿಪ್ರಾಯ | ಆರೋಪಿತರು ತಪಿತಸ್ಥರಿರುವುದಿಲ್ಲಾ |

ಸಹಿ/-
(ಶ್ರೀಮತಿ.ಹರ್ಷಿತ)
ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ, ಚಿಂತಾಮಣಿ.

**ತೀರ್ಪು**

ಪಿ.ಎಸ್.ಐ. ಚಿಂತಾಮಣಿ ಗ್ರಾಮಾಂತರ ಪೊಲೀಸ್ ಠಾಣೆ ಇವರು ಆರೋಪಿತನ ವಿರುದ್ಧ ತನಿಖೆಯನ್ನು ಪೂರೈಸಿ **ಭಾರತೀಯ ದಂಡ ಸಂಹಿತೆ ಕಲಂ -324, 504, 506 ಮತ್ತು 427** ರಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದರೆಃ** ಆರೋಪಿತನನ್ನು ಚಾಸಾ-1 ರವರು ಕ್ಯಾಂಟರ್ ವಾಹನಕ್ಕೆ ಕ್ಲೀನರ್ ಆಗಿ ಹಾವೇರಿಗೆ ಕರೆದುಕೊಂಡು ಹೋಗಿದ್ದು, ಇದಕ್ಕೆ ಚಾಸಾ-1 ರವರು ಆರೋಪಿಗೆ ರೂ.2,000/- ರೂ ಹಣವನ್ನು ಕೊಟ್ಟಿದ್ದು, ಆರೋಪಿಗೆ ಚಾಸಾ-1 ರವರು ಕಡಿಮೆ ಹಣವನ್ನು ಕೊಟ್ಟಿರುತ್ತಾರೆಂದು ದಿನಾಂಕ 25-03-2024 ರಂದು ರಾತ್ರಿ 11.00 ರ ಸಮಯದಲ್ಲಿ ಚಾಸಾ-1 ರವರು ಚಿಂತಾಮಣಿ ತಾಲ್ಲೂಕು ಕೈವಾರ ಗ್ರಾಮದ ಗುಡಬಾವಿ(ಗವಿ ಕ್ರಾಸ್) ಬಳಿ ಇದ್ದಾಗ, ಆರೋಪಿಯಾದ ನೀವು ಚಾಸಾ-1 ರವರ ಬಳಿಗೆ ಬಂದು ಚಾಸಾ-1 ರವರನ್ನು ಕುರಿತು ಗಾಂಡು ನನ್ನ ಮಗ ನೀನು ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುವುದಲ್ಲದೇ, ಚಾಸಾ-1 ರವರು ಏಕೆ ನನ್ನನ್ನು ಬೈಯುತ್ತಿರುವುದು ಎಂದು ಕೇಳಿದ್ದಕ್ಕೆ ಆರೋಪಿತನು ಚಾಕುವಿನಿಂದ ಚಾಸಾ-1 ರವರ ಎಡಕಣ್ಣಿನ ಹುಬ್ಬಿನ ಬಳಿ ತಿವಿದು ರಕ್ತಗಾಯವನ್ನುಂಟು ಮಾಡಿರುವುದಲ್ಲದೇ, ಕಲ್ಲಿನಿಂದ ಕಿವಿ, ಬೆನ್ನು ಮತ್ತು ಎದೆಯ ಮೇಲೆ ಹೊಡೆದು ಸಾಮಾನ್ಯ

ಸ್ವರೂಪದ ಗಾಯಗಳನ್ನುಂಟು ಮಾಡಿರುವುದಲ್ಲದೇ, ಚಾಸಾ-1 ರವರ ಬಳಿ ಇದ್ದ ಚಾಸಾ-5 ರವರ ಮೊಬೈಲ್ ಫೋನ್ ಅನ್ನು ಹೊಡೆದು ಹಾಕಿ ಸುಮಾರು ರೂ.30,000/- ರೂಗಳಷ್ಟು ನಷ್ಟ ಉಂಟು ಮಾಡಿರುವುದಲ್ಲದೇ, ಚಾಸಾ-1 ರವರಿಗೆ ನನ್ನ ಮಗನೇ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕುವ ಮೂಲಕ **ಭಾರತೀಯ ದಂಡ ಸಂಹಿತೆ ಕಲಂ 3 324, 504, 506 ಮತ್ತು 427** ರಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**3.** ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿದ ನಂತರ ಪೊಲೀಸರು ಸಲ್ಲಿಸಿದ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಿ, ಆರೋಪಿತನ ವಿರುದ್ದ ಸಂಜ್ಞೆಯನ್ನು ಕಲಂ 190 ಸಿ.ಆರ್.ಪಿ.ಸಿ ಅಡಿಯಲ್ಲಿ ಭಾ.ದಂ.ಸಂ. ಕಲಂ **324, 504, 506 ಮತ್ತು 427** ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳಿಗೆ ಸಂಜ್ಞೆಯನ್ನು ತೆಗೆದುಕೊಳ್ಳಲಾಗಿರುತ್ತದೆ. ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆದ ನಂತರ ದಂಡ ಪ್ರಕ್ರಿಯಾ ಸಂಹಿತೆ ಕಲಂ 207 ರಡಿಯಲ್ಲಿ ನೀಡಲಾದ ಪದವತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸರು ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳನ್ನು ಉಚಿತವಾಗಿ ನೀಡಿದ್ದು, ಆರೋಪಿತನ ಮೇಲೆ ದೋಷಾರೋಪಣೆಯನ್ನು ರಚಿಸಿ ಆರೋಪಿತನಿಗೆ ಓದಿ ಹೇಳಲಾಗಿ, ಆರೋಪಿತನು ವಿಚಾರಣೆಯಾಗಬೇಕೆಂದು ತಿಳಿಸಿರುತ್ತಾರೆ.

**4.** ಅಭಿಯೋಜನೆಯು ಆರೋಪಿತನ ವಿರುದ್ಧವಾದ ಅಪರಾಧವನ್ನು ಸಾಭೀತುಪಡಿಸಲು ಪ್ರಾಸಾ-1 ಮತ್ತು 2 ರವರನ್ನು ವಿಚಾರಣೆಗೆ ಒಳಪಡಿಸುವ ಮೂಲಕ ನಿಪಿ-1 ರಿಂದ 3 ದಾಖಲಾತಿಯನ್ನು ಗುರುತಿಸಿರುತ್ತಾರೆ. ಪ್ರಾಸಾ-1 ಮತ್ತು 2 ರವರು ಪ್ರಮುಖ ಸಾಕ್ಷಿಯಾಗಿದ್ದು ಅಭಿಯೋಜನೆಗೆ ವಿರುದ್ಧವಾದ ಸಾಕ್ಷ್ಯ ನುಡಿದಿದ್ದರಿಂದ ಉಳಿದ

ಸಾಕ್ಷಿದಾರರ ವಿಚಾರಣೆ ಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. ಆದ್ದರಿಂದ ಮಾನ್ಯ ಅಭಿಯೋಜನೆಯ ಪರ ವಕೀಲರ ಮನವಿಯನ್ನು ತಿರಸ್ಕರಿಸಿ, ಸಾಕ್ಷವನ್ನು ಮುಕ್ತಾಯಗೊಳಿಸಲಾಯಿತು. ಆರೋಪಿತನಿಗೆ ವಿರುದ್ಧವಾದ ಸಂದರ್ಭ ಮತ್ತು ಸನ್ನಿವೇಶಗಳು ವಿಚಾರಣೆಯಲ್ಲಿ ಬರದೇ ಇದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆಯನ್ನು ಮನ್ನಾ ಮಾಡಲಾಯಿತು ಮತ್ತು ಆರೋಪಿತರು ತಮ್ಮ ಪರ ಯಾವುದೇ ಸಾಕ್ಷ್ಯ ವಿಚಾರಣೆ ಮಾಡುವುದರ ಮೂಲಕ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲಾ.

5. ಉಭಯ ಪಕ್ಷಗಾರರ ವಾದವನ್ನು ಆಲಿಸಿ ದಾಖಲೆಗಳನ್ನು ಪರಿಶೀಲಿಸಿದೆ.

6. ಪ್ರಕರಣಕ್ಕೆ ಸಂಬಂದಿಸಿ ತನಿಖಾಧಿಕಾರಿಗಳು ಸಲ್ಲಿಸಿರುವ ದೋಷಾರೋಪಣಾ ಪತ್ರ ಹಾಗೂ ಕಡತದಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ನನ್ನ ಪರಿಗಣನೆಗೆ ಉದ್ಭವಿಸಿದ ಅಂಶಗಳೆಂದರೆಃ

**ಅಂಶಃ1 ಅಭಿಯೋಜನೆಯು ಆರೋಪಿತನನ್ನು ಚಾಸಾ–1 ರವರು ಕ್ಯಾಂಟರ್ ವಾಹನಕ್ಕೆ ಕ್ಲೀನರ್ ಆಗಿ ಹಾವೇರಿಗೆ ಕರೆದುಕೊಂಡು ಹೋಗಿದ್ದು, ಇದಕ್ಕೆ ಚಾಸಾ–1 ರವರು ಆರೋಪಿಗೆ ರೂ.2,000/– ರೂ ಹಣವನ್ನು ಕೊಟ್ಟಿದ್ದು, ಆರೋಪಿಗೆ ಚಾಸಾ–1 ರವರು ಕಡಿಮೆ ಹಣವನ್ನು ಕೊಟ್ಟಿರುತ್ತಾರೆಂದು ದಿನಾಂಕ 25–03–2024 ರಂದು ರಾತ್ರಿ 11.00 ರ ಸಮಯದಲ್ಲಿ ಚಾಸಾ–1 ರವರು ಚಿಂತಾಮಣಿ ತಾಲ್ಲೂಕು ಕೈವಾರ ಗ್ರಾಮದ ಗುಡಬಾವಿ(ಗವಿ ಕ್ರಾಸ್) ಬಳಿ ಇದ್ದಾಗ, ಆರೋಪಿತನು ಚಾಸಾ–1 ರವರ ಬಳಿಗೆ ಬಂದು ಚಾಸಾ–1 ರವರನ್ನು ಕುರಿತು ಗಾಂಡು ನನ್ನ ಮಗ ನೀನು ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೂಲಕ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ – 504 ರಡಿಯಲ್ಲಿ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**<u>ಅಂಶ:2</u> ಅಭಿಯೋಜನೆಯು ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಅದೇ ಸಂಬಂಧವಾಗಿ, ಆರೋಪಿ ನಿಮ್ಮನ್ನು ಚಾಸಾ–1 ರವರು ಏಕೆ ನನ್ನನ್ನು ಬೈಯುತ್ತಿರುವುದು ಎಂದು ಕೇಳಿದ್ದಕ್ಕೆ ಆರೋಪಿತನು ಚಾಕುವಿನಿಂದ ಚಾಸಾ–1 ರವರ ಎಡಕಣ್ಣಿನ ಹುಬ್ಬಿನ ಬಳಿ ತಿವಿದು ರಕ್ತಗಾಯವನ್ನುಂಟು ಮಾಡಿದ್ದು, ಕಲ್ಲಿನಿಂದ ಕಿವಿ, ಬೆನ್ನು ಮತ್ತು ಎದೆಯ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ಆ ಮೂಲಕ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ – 324 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**<u>ಅಂಶ:3</u> ಅಭಿಯೋಜನೆಯು ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಅದೇ ಸಂಬಂಧವಾಗಿ, ಆರೋಪಿತನು ಚಾಸಾ–1 ರವರ ಬಳಿ ಇದ್ದ ಚಾಸಾ–5 ರವರ ಮೊಬೈಲ್ ಫೋನ್ ಅನ್ನು ಹೊಡೆದು ಹಾಕಿ ಸುಮಾರು ರೂ.30,000/– ರೂಗಳಷ್ಟು ನಷ್ಟ ಉಂಟು ಮಾಡಿದ್ದು, ಆ ಮೂಲಕ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ – 427 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**<u>ಅಂಶ:4</u> ಅಭಿಯೋಜನೆಯು ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಅದೇ ಸಂಬಂಧವಾಗಿ, ಆರೋಪಿತನು ಚಾಸಾ–1 ರವರನ್ನು ಕುರಿತು ನನ್ನ ಮಗನೇ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿದ್ದು, ಆ ಮೂಲಕ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ – 506 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು ರುಜುವಾತು ಪಡಿಸಿದ್ದಾರೆಯೇ?**

**<u>ಅಂಶ:5</u> ಆದೇಶ ಏನು?**

7. ಈ ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರ:

| | | |
|---|---|---|
| ಅಂಶ 1 ರಿಂದ 4 | : | ನಕಾರತ್ಮಕವಾಗಿ |
| ಅಂಶ 5 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ |

**<u>* ಕಾರಣಗಳು *</u>**

8. **<u>ಅಂಶ 1 ರಿಂದ ಅಂಶ 4–</u>** ಅಂಶ 1 ರಿಂದ 4 ಒಂದಕ್ಕೊಂದು ಸಂಬಂಧ ಹೊಂದಿರುವುದಿರಿಂದ ಸಾಕ್ಷಿದಾರರ ಪುನರಾವರ್ತನೆಯನ್ನು ತಡೆಯುವ ಸಲುವಾಗಿ, ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಯಿತು.

9. ಆರೋಪಿತನನ್ನು ಚಾಸಾ–1 ರವರು ಕ್ಯಾಂಟರ್ ವಾಹನಕ್ಕೆ ಕ್ಲೀನರ್ ಆಗಿ ಹಾವೇರಿಗೆ ಕರೆದುಕೊಂಡು ಹೋಗಿದ್ದು, ಇದಕ್ಕೆ ಚಾಸಾ–1 ರವರು ಆರೋಪಿಗೆ ರೂ.2,000/– ರೂ ಹಣವನ್ನು ಕೊಟ್ಟಿದ್ದು, ಆರೋಪಿಗೆ ಚಾಸಾ–1 ರವರು ಕಡಿಮೆ ಹಣವನ್ನು ಕೊಟ್ಟಿರುತ್ತಾರೆಂದು ದಿನಾಂಕ 25–03–2024 ರಂದು ರಾತ್ರಿ 11.00 ರ ಸಮಯದಲ್ಲಿ ಚಾಸಾ–1 ರವರು ಚಿಂತಾಮಣಿ ತಾಲ್ಲೂಕು ಕೈವಾರ ಗ್ರಾಮದ ಗುಡಬಾವಿ(ಗವಿ ಕ್ರಾಸ್) ಬಳಿ ಇದ್ದಾಗ, ಆರೋಪಿಯಾದ ನೀವು ಚಾಸಾ–1 ರವರ ಬಳಿಗೆ ಬಂದು ಚಾಸಾ–1 ರವರನ್ನು ಕುರಿತು ಗಾಂಡು ನನ್ನ ಮಗ ನೀನು ಎಂದು ಅವ್ಯಾಚ್ಯ ಶಬ್ದಗಳಿಂದ ಬೈದಿರುವುದಲ್ಲದೇ, ಚಾಸಾ–1 ರವರು ಏಕೆ ನನ್ನನ್ನು ಬೈಯುತ್ತಿರುವುದು ಎಂದು ಕೇಳಿದ್ದಕ್ಕೆ ಆರೋಪಿತನು ಚಾಕುವಿನಿಂದ ಚಾಸಾ–1 ರವರ ಎಡಕಣ್ಣಿನ ಹುಬ್ಬಿನ ಬಳಿ ತಿವಿದು ರಕ್ತಗಾಯವನ್ನುಂಟು ಮಾಡಿರುವುದಲ್ಲದೇ, ಕಲ್ಲಿನಿಂದ ಕಿವಿ, ಬೆನ್ನು ಮತ್ತು ಎದೆಯ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿರುವುದಲ್ಲದೇ, ಚಾಸಾ–1 ರವರ ಬಳಿ ಇದ್ದ ಚಾಸಾ–5 ರವರ ಮೊಬೈಲ್ ಫೋನ್ ಅನ್ನು ಹೊಡೆದು ಹಾಕಿ ಸುಮಾರು ರೂ.30,000/– ರೂಗಳಷ್ಟು ನಷ್ಟ ಉಂಟು ಮಾಡಿರುವುದಲ್ಲದೇ, ಚಾಸಾ–1 ರವರಿಗೆ ನನ್ನ ಮಗನೇ ನಿನ್ನನ್ನು ಜೀವ ಸಹಿತ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿ ಅಪರಾಧ ಮಾಡಿದ್ದಾರೆ ಎಂಬುದಾಗಿರುತ್ತದೆ.

ಮೇಲ್ಕಂಡ ಅಂಶಗಳನ್ನು ರುಜುವಾತುಪಡಿಸುವ ಹೊಣೆಗಾರಿಕೆ ಅಭಿಯೋಜನೆಯದ್ದಾಗಿರುತ್ತದೆ.

10. ಅಭಿಯೋಜನೆಯು ಆರೋಪಿತರ ವಿರುದ್ಧ ಅಪರಾಧಗಳನ್ನು ಸಾಭೀತುಪಡಿಸಲು ಚಾಸಾ-1 ವಿನಯ್ ರವರು ಫಿರ್ಯಾದುದಾರರಾಗಿದ್ದು, ಇವರನ್ನು ಫ್ರಾಸಾ-1 ರವರನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷದಲ್ಲಿ "ಚಾಸಾ-2 ರಿಂದ 5 ನನ್ನ ಸ್ನೇಹಿತರು. ಆರೋಪಿ ನನ್ನ ಸ್ನೇಹಿತ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಮತ್ತು ಆರೋಪಿತನ ನಡುವೆ ಗಲಾಟೆ ನಡೆದಿಲ್ಲ. ಆರೋಪಿತನು ಚಾಕು ಮತ್ತು ಕಲ್ಲಿನಿಂದ ಹೊಡೆದಿಲ್ಲ. ಚಾಸಾ-5 ರವರ ಮೊಬೈಲ್ ನ್ನು ಹೊಡೆದು ಹಾಕಿಲ್ಲ, ಅವ್ಯಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣಬೆದರಿಕೆಯನ್ನು ಹಾಕಿಲ್ಲ. ನಾನು ಜಮೀನಿನಲ್ಲಿ ಕೆಲಸ ಮಾಡುವಾಗ ಆಯಾ ತಪ್ಪಿ ಬಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವಾಗ ಚಿಂತಾಮಣಿ ಪೊಲೀಸರು ಬಂದು ಕೆಲವು ದಾಖಲಾತಿಗಳನ್ನು ಸಹಿಯನ್ನು ಪಡೆದಿರುತ್ತಾರೆ. ಪೊಲೀಸರಿಗೆ ಯಾವುದೇ ದೂರನ್ನು ಕೊಟ್ಟಿಲ್ಲ. ನಿಪಿ-1 ಮತ್ತು 2 ರಲ್ಲಿರುವ ಸಂಗತಿಗಳ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿಲ್ಲ ಮತ್ತು ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನ್ಯಾಯಾಲಯದ ಮುಂದಿರುವ ಚಾಕು, ಕಲ್ಲನ್ನು ಮತ್ತು ಫೋನ್ ನ್ನು ನೋಡಿದರೆ ಗುರುತಿಸಲಾಗುವುದಿಲ್ಲ" ಎಂದು ಸಂಪೂರ್ಣವಾಗಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಪ್ರಾರ್ಥನೆ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಸುದೀರ್ಘವಾದ ಪಾಟೀ ಸವಾಲು ಮಾಡಲಾಗಿ ಸಾಕ್ಷಿಯು ಅಭಿಯೋಜನೆಗೆ ಅನುಗುಣವಾದ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ.

**11.** ಅಭಿಯೋಜನೆಯು ಆರೋಪಿತರ ವಿರುದ್ಧ ಅಪರಾಧಗಳನ್ನು ಸಾಭೀತುಪಡಿಸಲು ಚಾಸಾ–1 ಶ್ರವಣ್ ರವರು ಪ್ರತ್ಯಕ್ಷ ಸಾಕ್ಷಿದಾರರು, ಇವರನ್ನು ಫ್ರಾಸಾ–2 ರವರನ್ನಾಗಿ ವಿಚಾರಣೆಗೆ ಒಳಪಡಿಸಿದ್ದು, ಇವರು ತಮ್ಮ ಸಾಕ್ಷದಲ್ಲಿ "ಚಾಸಾ–2 ರಿಂದ 4 ನನ್ನ ಸ್ನೇಹಿತರು. ಆರೋಪಿ ನನ್ನ ಸ್ನೇಹಿತ. ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ಚಾಸಾ–1 ಮತ್ತು ಆರೋಪಿತನ ನಡುವೆ ಗಲಾಟೆ ನಡೆದಿಲ್ಲ. ಆರೋಪಿತನು ಚಾಸಾ–1 ರವರಿಗೆ ಚಾಕು ಮತ್ತು ಕಲ್ಲಿನಿಂದ ಹೊಡೆದಿಲ್ಲ. ಚಾಸಾ–5 ರವರ ಮೊಬೈಲ್ ನ್ನು ಹೊಡೆದು ಹಾಕಿಲ್ಲ, ಅವ್ಯಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣಬೆದರಿಕೆಯನ್ನು ಹಾಕಿಲ್ಲ. ಸದರಿ ವಿಚಾರವಾಗಿ ನಾನು ಪೊಲೀಸರಿಗೆ ಹೇಳಿಕೆಯನ್ನು ನೀಡಿಲ್ಲ. ನ್ಯಾಯಾಲಯದ ಮುಂದಿರುವ ಚಾಕು, ಕಲ್ಲನ್ನು ಮತ್ತು ಪೋನ್ ನ್ನು ನೋಡಿದರೆ ಗುರುತಿಸಲಾಗುವುದಿಲ್ಲ" ಎಂದು ಸಂಪೂರ್ಣವಾಗಿ ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಸಹಾಯಕ ಸರ್ಕಾರಿ ಅಭಿಯೋಜಕರ ಪ್ರಾರ್ಥನೆ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿ ಸಹಾಯಕ ಸರ್ಕಾರಿ ಅಭಿಯೋಜಕರು ಸುದೀರ್ಘವಾದ ಪಾಟೀ ಸವಾಲು ಮಾಡಲಾಗಿ ಸಾಕ್ಷಿಯು ಅಭಿಯೋಜನೆಗೆ ಅನುಗುಣವಾದ ಯಾವುದೇ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಸಾಕ್ಷಿಯು ಅಲ್ಲಗಳೆದಿರುವುದರಿಂದ ಸಾಕ್ಷಿಯು ಪೊಲೀಸರಿಗೆ ನೀಡಿದ ಮರುಹೇಳಿಕೆಯನ್ನು ನಿಪಿ–3 ಎಂದು ಗುರುತಿಸಲಾಯಿತು.

**12.** ಈ ಮೇಲಿನ ಫ್ರಾಸಾ–1 ರವರು ಫಿರ್ಯಾದುದಾರರಾಗಿದ್ದು, ಫ್ರಾಸಾ–2 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು, ಸಂಪೂರ್ಣವಾಗಿ ಅಭಿಯೋಜನೆಗೆ ಪ್ರತಿಕೂಲ ಸಾಕ್ಷಿ ನುಡಿದಿದ್ದು, ಆ ಕಾರಣ ಉಳಿದ ಸಾಕ್ಷಿದಾರರುಗಳ ವಿಚಾರಣೆ ಮಾಡುವ ಅವಶ್ಯಕತೆ ಕಂಡುಬರುವುದಿಲ್ಲ. ಸಹಾಯ ಸರ್ಕಾರಿ ಅಭಿಯೋಜಕರು ಇತರ ಸಾಕ್ಷಿದಾರರಿಗೆ ಸಮನ್ಸ್ ನೀಡಲು ಮಾಡಿಕೊಂಡ ಪ್ರಾರ್ಥನೆಯನ್ನು ತಿರಸ್ಕರಿಸಲಾಯಿತು. ಅಭಿಯೋಜನಾ

ಸಾಕ್ಷವನ್ನು ಮುಕ್ತಾಯಗೊಳಿಸಲಾಯಿತು. ಆರೋಪಿತನಿಗೆ ವಿರುದ್ಧವಾದ ಸಂದರ್ಭ ಮತ್ತು ಸನ್ನಿವೇಶಗಳು ವಿಚಾರಣೆಯಲ್ಲಿ ಬರದೇ ಇದ್ದ ಕಾರಣ ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತನ ಹೇಳಿಕೆಗಳನ್ನು ಮನ್ನಾ ಮಾಡಲಾಯಿತು.

**13.** ಫ್ರಾಸಾ-1 ಮತ್ತು 2 ರವರ ಸಾಕ್ಷ ಈ ಪ್ರಕರಣದ ಸಂಗತಿಗೆ ಸಂಭಂಧಿಸಿದಂತೆ ಪುಷ್ಟೀಕರಿಸಲು ಸಾಕ್ಷಾದಾರದ ಕೊರತೆ ಇದ್ದು ಮತ್ತು ಅವರು ಪ್ರತಿಕೂಲ ಸಾಕ್ಷ ನುಡಿದಿರುತ್ತಾರೆ. ಮೇಲ್ಕಂಡ ವಿವರಣೆ ಆಧಾರದಲ್ಲಿ ನ್ಯಾಯಾಲಯದ ದೃಷ್ಟಿಯಲ್ಲಿ ಅಭಿಯೋಜನೆಯು ಆರೋಪಿತನ ಮೇಲೆ ಹೊರಿಸಲಾದ ಆರೋಪಣೆಗಳನ್ನು ಸಾಬೀತುಪಡಿಸುವ ನಂಬಲು ಅರ್ಹವಾದ ಪೂರಕ ಸಾಕ್ಷವನ್ನು ಅಭಿಯೋಜನೆಯವರು ಹಾಜರು ಮಾಡಲು ವಿಫಲರಾಗಿರುತ್ತಾರೆ. ಕಾರಣ ಆರೋಪಿತನ ವಿರುದ್ಧ ಆರೋಪಿಸಿರುವಂತೆ ಕೃತ್ಯ ಎಸಗಿದ್ದಾರೆಂದು ಹೇಳಲಾಗುವುದಿಲ್ಲ. ಆರೋಪಿತನ ವಿರುದ್ಧ ಅಪರಾಧಗಳನ್ನು ನ್ಯಾಯಾಲಯದ ಮುಂದೆ ಸಂಶಯತೀತವಾಗಿ ರುಜುವಾತುಪಡಿಸದೇ ಇರುವುದರಿಂದ ಸಂಶಯದ ಅನುಕೂಲತೆಯನ್ನು ಆರೋಪಿತನಿಗೆ ಕೊಡಲಾಗುವುದು. ಮೇಲೆ ಹೇಳಿದ ಕಾರಣಗಳಿಗಾಗಿ ಅಂಶ 1 ರಿಂದ ಅಂಶ 4 ಕ್ಕೆ ನಕಾರಾತ್ಮವಾಗಿ ಉತ್ತರಿಸಲಾಗಿದೆ.

**13.** **ಅಂಶಃ5** ಅಂಶ 1 ರಿಂದ 4 ರಲ್ಲಿ ಚರ್ಚಿಸಲಾದಂತೆ ಈ ಅಂಶವನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

***ಆದೇಶ ***

**ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿರುವ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ-324, 504, 506 ಮತ್ತು 427 ರ ಅನ್ವಯ**

**ಅಪರಾಧಗಳಲ್ಲಿ ನಿರ್ದೋಷಿ ಎಂದು ಬಿಡುಗಡೆ ಮಾಡಿ ಸ್ವತಂತ್ರನೆಂದು ನಿರ್ದೇಶಿಸಲಾಗಿದೆ.**

**ಫಿ.ಎಫ್.ನಂಃ 108/2024 ದಿನಾಂಕ 27-03-2024 ರಲ್ಲಿ ತೋರಿಸಿದ ಚಾಕು ಮತ್ತು ಕಲ್ಲು ಬೆಲೆ ರಹಿತವಾಗಿದ್ದು ಅದನ್ನು ಅಪೀಲು ಅವಧಿ ಮುಗಿದ ನಂತರ ನಾಶಪಡಿಸಲು ಆದೇಶಿಸಲಾಗಿದೆ.**

(ಶೀಘ್ರಲಿಪಿಗಾರರಿಂದ ಬೆರಳಚ್ಚು ಮಾಡಿಸಿ ಅದನ್ನು ತಿದ್ದುಪಡಿ ಮಾಡಿ 2026 ನೇ ಇಸವಿ ಜೂನ್ ತಿಂಗಳ 02 ನೇ ದಿನಾಂಕದಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-
**(ಶ್ರೀಮತಿ. ಹರ್ಷಿತ)**
**ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಚಿಂತಾಮಣಿ.**

**<u>*ಅನುಭಂದ *</u>**

**1. ಅಭಿಯೋಜನೆಯ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ**

ಫ್ರಾಸಾ-1 - ವಿನಯ್.
ಫ್ರಾಸಾ-2 - ಶ್ರವಣ್

**2. ಆರೋಪಿತರ ಪರ ವಿಚಾರಿಸಲಾದ ಸಾಕ್ಷಿಗಳ ಪಟ್ಟಿ**

- ಇಲ್ಲಾ -

**3. ಅಭಿಯೋನೆಯ ಪರ ಗುರುತಿಸಲಾದ ದಾಖಲೆಗಳ ಪಟ್ಟಿ**

ನಿಪಿ-1 - ಫ್ರಾಸಾ-1 ರವರ ದೂರು
ನಿಪಿ-1(ಎ) - ಫ್ರಾಸಾ-1 ರವರ ಸಹಿ
ನಿಪಿ-2 - ಸ್ಥಳ ಪಂಚನಾಮೆ.
ನಿಪಿ-2(ಎ) - ಫ್ರಾಸಾ-1 ರವರ ಸಹಿ.
ನಿಪಿ-3 - ಫ್ರಾಸಾ-2 ರವರ ಹೇಳಿಕೆ.

**4. ಆರೋಪಿತರ ಪರ ಗುರುತಿಸಲಾದ ದಾಖಲೆಗಳ ಪಟ್ಟಿ**

- ಇಲ್ಲಾ -

**5. ಗುರುತಿಸಲಾದ ಮುದ್ದೆಮಾಲುಗಳು ಃ**

– ಇಲ್ಲಾ –

ಸಹಿ/-

**(ಶ್ರೀಮತಿ. ಹರ್ಷಿತ)**
**ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ**
**ದರ್ಜೆ ನ್ಯಾಯಿಕ ದಂಡಾಧಿಕಾರಿಯವರ**
**ನ್ಯಾಯಾಲಯ, ಚಿಂತಾಮಣಿ.**